
ತಮಿಳುನಾಡಿನ ನಾಯನಾರ್ ಸಂತರು – ೧೧

# ವರಗುಣ ಪಾಂಡ್ಯ

ಕಥೆ : ಎಂ. ಜಯಶ್ರೀ

ಚಿತ್ರ : ಶಂಕರ್


**1** ಮದುರೆಯ ರಾಜನಾದ ವರಗುಣ ಪಾಂಡ್ಯನು ದೊಡ್ಡ ಶಿವಭಕ್ತನಾಗಿದ್ದ.





**2** ಒಂದು ದಿವಸ ಅವನು ಬೇಟೆಯಾಡಲು ಕಾಡಿಗೆ ಹೋಗಿದ್ದ. ಬೇಟೆಯಾಡಿದ ನಂತರ ಕುದುರೆಯನ್ನೇರಿ ಅರಮನೆಗೆ ಮರಳುತ್ತಿರುವಾಗ ರಾತ್ರಿಯಾಗಿತ್ತು. ದಾರಿ ಮಧ್ಯೆ ಒಬ್ಬ ಸಾಧು ನಿದ್ರಿಸುತ್ತಿದ್ದ. ಕುದುರೆ ಅವನನ್ನು ದಾಟಿಕೊಂಡು ಸಾಗುವಾಗ ಅವನನ್ನು ತುಳಿದು, ಸಾಧು ಅಲ್ಲೇ ಮೃತಪಟ್ಟ. ಇದರ ಫಲವಾಗಿ ರಾಜನ ಮೇಲೆ ಅವನನ್ನು ಕೊಂದ ಪಾಪ ತಗುಲಿತು.




**3** ಅರಮನೆಗೆ ಮರಳಿದ ರಾಜ ತನ್ನ ತಪ್ಪಿಗಾಗಿ ಮರುಗಿದ. ಅವನು ವಿದ್ವಾಂಸರನ್ನು ಕರೆಸಿದ.




**4** ವಿದ್ವಾಂಸರು ಹೇಳಿದಂತೆ ರಾಜ ವ್ರತ ತೆಗೆದುಕೊಂಡ.





**5** ಶಿವನು ಹೇಳಿದಂತೆ ಕೆಲವು ದಿನಗಳಲ್ಲೇ ಚೋಳರಾಜನು ಮದುರೆಯನ್ನು ಆಕ್ರಮಿಸಿದ. ಆದರೆ ವರಗುಣ ಅವನನ್ನು ಸೋಲಿಸಿ ಓಡಿಸಿದ.




**6** ಅನಂತರ ವರಗುಣ ರಾಜನು ತಿರುವಿಡೈಮರುದೂರ್‌ಗೆ ಹೋಗಿ ಅಲ್ಲಿ ಶಿವಾಲಯವನ್ನು ಪ್ರವೇಶಿಸುವಷ್ಟರಲ್ಲಿ ಒಂದು ಅಶರೀರವಾಣಿ ಕೇಳಿಬಂತು.




**7** ಅಂತೆಯೇ ರಾಜನು ದೇವಾಲಯದ ಪಶ್ಚಿಮ ದ್ವಾರದಿಂದ ಪ್ರವೇಶಿಸಿ, ಶಿವನನ್ನು ಆರಾಧಿಸಿದ.




**8** ದೇವರ ಹೆಸರನ್ನು ಕೇಳಿದ ಕೂಡಲೇ ವರಗುಣ ರಾಜನ ಹೃದಯ ಕರಗಿ ಹೋಗುತ್ತಿತ್ತು. ಒಂದು ದಿನ ರಾಜಭಟರು ಕಳ್ಳತನದ ಆಪಾದನೆ ಹೊತ್ತ ವ್ಯಕ್ತಿಯೊಬ್ಬನನ್ನು ರಾಜನೆದುರು ಕರೆತಂದರು.




ರಾಜಾಜ್ಞೆಯಂತೆ ಆ ವ್ಯಕ್ತಿ ಬಿಡುಗಡೆಗೊಂಡ.

9


ವರಗುಣನಿಗೆ ಒಂದೇ ಮನಸ್ಸಿನಿಂದ ಶಿವನ ನಾಮಜಪ ಮಾಡುವ ಅಭ್ಯಾಸವಿತ್ತು. ಒಂದು ಸಲ ಚಳಿಗಾಲದಲ್ಲಿ ನರಿಗಳು, ‘ಓ... ಓ...’ ಎಂದು ಊಳಿಡುತ್ತಿದ್ದವು. ರಾಜನಿಗೆ ಅದು ‘ಶಂಭೋ...’ ಎಂದು ಶಿವನನ್ನು ಕರೆಯುವ ಸದ್ದಿನಂತೆ ಕೇಳಿಸಿತು.




ಅಂತೆಯೇ ಅವುಗಳಿಗೆ ರಾಜ ಕಂಬಳಿ ಹೊದೆಸಿದ.


10

ಇನ್ನೊಂದು ಸಲ ಒಂದು ಕೆರೆಯ ಬಳಿ ಅನೇಕ ಕಪ್ಪೆಗಳು ‘ಕರಕರ’ ಎಂದು ಸದ್ದು ಮಾಡುತ್ತಿದ್ದವು. ಅದು ರಾಜನಿಗೆ ‘ಹರ ಹರ’ ಎಂಬ ಸದ್ದಿನಂತೆ ಕೇಳಿಸಿತು.





11

ಒಂದು ಸಲ ಒಂದು ಶಿವಮಂದಿರದಲ್ಲಿ ಎಳ್ಳನ್ನು ಬಿಸಿಲಿನಲ್ಲಿ ಒಣಗಿಸಲು ಹರಡಿದ್ದರು. ಒಬ್ಬ ವ್ಯಕ್ತಿ ಬಂದು ಅದನ್ನು ತಿಂದು ಬಿಟ್ಟ. ರಾಜಭಟರು ಬಂದು ಅವನನ್ನು ಬಂಧಿಸಿ, ರಾಜನೆದುರು ಕರೆತಂದರು.



**12** ಮಹಾರಾಜ! ಇಲ್ಲಿ ಕೇಳು. ಯಾವುದಾದರೂ ಮನೆಯಿಂದ ಎಳ್ಳನ್ನು ಕದ್ದುತಿಂದರೆ ಮುಂದಿನ ಜನ್ಮದಲ್ಲಿ ಅರಮನೆಯಲ್ಲಿ ಎತ್ತಾಗಿ ಹುಟ್ಟಬೇಕಾಗುವುದು. ದೇವಾಲಯದಲ್ಲಿ ಕಳ್ಳತನ ಮಾಡಿದರೆ ಅಲ್ಲಿ ಎತ್ತಾಗಿ ಹುಟ್ಟಿ ಶಿವನ ಸೇವೆ ಮಾಡಬಹುದು ಎಂದು ನಾನು ಕದ್ದು ತಿಂದೆ.





ರಾಜನು ಆ ಕಳ್ಳನ ಬಾಯಲ್ಲಿ ಅಂಟಿಕೊಂಡಿದ್ದ ಎಳ್ಳನ್ನು ತೆಗೆದು ತನ್ನ ಬಾಯಿಗೆ ಹಾಕಿಕೊಂಡ.

**13** ಇನ್ನೊಂದು ಬಾರಿ ವರಗುಣ ಪಾಂಡ್ಯನು ಬೇವಿನ ಮರಗಳು ಸಾಲುಸಾಲಾಗಿದ್ದ ರಸ್ತೆಯಲ್ಲಿ ನಡೆದಾಡುತ್ತಿದ್ದ. ಅಲ್ಲಿ ಬಿದ್ದಿದ್ದ ಬೇವಿನ ಬೀಜಗಳಲ್ಲಿ ಕೆಲವು ಮರಳಲ್ಲಿ ಹೂತುಹಾಕಿಕೊಂಡಿದ್ದವು. ಮೇಲಕ್ಕೆ ಎದ್ದು ಕಾಣಿಸುತ್ತಿದ್ದ ಬೀಜ ಗಳು ಶಿವಲಿಂಗಗಳಂತೆ ಕಂಡುಬಂದವು.





ರಾಜಭಟರು ರಾಜನ ಆಣತಿಯನ್ನು ಪಾಲಿಸಿದರು.

**14** ರಾಜನು ಸೋಮಸುಂದರ ದೇವರ ಮುಂದೆ ನಿಂತು ಪ್ರಾರ್ಥಿಸಿದ.




**15** ಕೈಲಾಸದಲ್ಲಿ ಶಿವನು ತನ್ನ ಗಣ ನಂದಿಕೇಶ್ವರನಿಗೆ ಆಜ್ಞಾಪಿಸಿ, ರಾಜನಿಗೆ ಮದುರೆಯಲ್ಲೇ ಶಿವಲೋಕವನ್ನು ತೋರಿಸಲು ಹೇಳಿದ. ಅಂತೆಯೇ ರಾಜನಿಗೆ ಶಿವಲೋಕದ ದರ್ಶನವಾಯಿತು. ಅವನು ಅತ್ಯಂತ ಆನಂದಭರಿತನಾದ.



ವರಗುಣ ಪಾಂಡ್ಯನ ಕಥೆ ಭಕ್ತಿಗೆ ಅತ್ಯುತ್ತಮ ಉದಾಹರಣೆಯಾಗಿದೆ.